## 3

# ಪ್ರಾರ್ಥನೆಯು ... ಆಗಿರುವದಿಲ್ಲ

ಪ್ರಾರ್ಥನೆಯು "ಒಳಗೆ" ಇದೆ. ಅದು ಬಹಳವಾಗಿ ಪ್ರಸಿದ್ಧವಾಗಿದೆ. ಧರ್ಮವು "ಒಳಗಿದೆ." ಧಾರ್ಮಿಕ ಪುಸ್ತಕಗಳ ಅಂಗಡಿಗಳು ವರ್ಷದಲ್ಲಿ ನಾಲ್ಕು ಮಿಲಿಯ ಡಾಲರುಗಳಿಗಿಂತಲೂ ಹೆಚ್ಚು ವ್ಯಾಪಾರ ಮಾಡುತ್ತಲಿವೆ. ಭಾವನೆಗಳು "ಒಳಗೆ" ಇವೆ. ರಹಸ್ಯಾರ್ಥವುಳ್ಳದ್ದು "ಒಳಗೆ" ಇದೆ. ಪ್ರಾರ್ಥನಾ ಸಮ್ಮೇಳನಗಳೂ ರೀಟ್ರೀಟಗಳೂ ಏರ್ಪಡಿಸಲ್ಪಡುತ್ತಿವೆ. ಪ್ರಾರ್ಥನಾ ಅಲ್ಪೋಪಹಾರಗಳು ಪ್ರಸಿದ್ಧವಾಗಿವೆ. ಪ್ರಾರ್ಥನಾ ಕ್ರುಸೇಡುಗಳಲ್ಲಿ ಸಾವಿರಗಟ್ಟಲೆ ಜನರು ಭಾಗವಹಿಸುತ್ತಾರೆ. "ಸಮೃದ್ಧಿಯ ಸುವಾರ್ತಾ ಪ್ರಸಂಗಿಗಳು" "ಪ್ರಾರ್ಥನಾ ಯೋಧರನ್ನು" ಪ್ರತಿಷ್ಠಿಸುತ್ತಿದ್ದಾರೆ. "ಪ್ರಾರ್ಥನೆಯಲ್ಲಿ ನೀವು ಬಯಸಿದ ಯಾವುದನ್ನಾದರೂ ಪಡೆಯಬಹುದು" ಎಂದು ಜನರಿಗೆ ಬೋಧಿಸಲ್ಪಡುತ್ತಲಿದೆ. ವಿನೋದಪಡಿಸುವದಕ್ಕಿಂತ ಅದು ಹೆಚ್ಚಾಗಿ ಗಲಿಬಿಲಿ ಪಡಿಸುವಂಥದ್ದಾಗಿದೆ. ಈ ಧಾರ್ಮಿಕ ಉತ್ಸಾಹದಲ್ಲಿ ನಾವು ಆನಂದ ಪಡಬೇಕೋ? ಅವಶ್ಯವಾಗಿ ಇಲ್ಲ.

*ಜ್ಞಾಪಿಸಿಕೊಳ್ಳಿರಿ,* ದೇವರು ಒದಗಿಸುತ್ತಾನೆ ... ಸೈತಾನನು ಕಪಟವಾದವುಗಳನ್ನು ಮಾತ್ರ ಕೊಡುತ್ತಾನೆ. ಧಾರ್ಮಿಕವಾದಿಗಳು ದೇವರ ಬಗ್ಗೆ ಮಾತಾಡುತ್ತಾರೆ, ಆದರೆ ಬೈಬಲಿನ ದೇವರ ಬಗ್ಗೆ ಅಲ್ಲ. ಇಂದು ಅನೇಕರಿಗೆ ಮೂಢನಂಬಿಕೆಯ ವಿಶ್ವಾಸವಿದೆ, ಆದರೆ ಬೈಬಲ್ ನಂಬಿಕೆಯದಾಗಿರುವದಿಲ್ಲ. ಜನರು ಪ್ರಾರ್ಥನೆಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ, ಆದರೆ ಅವರಿಗೆ ಬೈಬಲಿಗನುಗುಣವಾದ ಪ್ರಾರ್ಥನೆಯಿರುವದಿಲ್ಲ, ಹಲವಾರು ಅಗತ್ಯವಾದ ಸಮಸ್ಯೆಗಳು ಚರ್ಚಿಸಲ್ಪಡತಕ್ಕದ್ದು.

ಪ್ರಾರ್ಥನೆಯು ಮಂತ್ರವಿದ್ಯೆಯಾಗಿರುವದಿಲ್ಲ. ಅದು ಯಾವುದೇ ರಹಸ್ಯವಾದ ಬಲವನ್ನು ಹೊಂದಿರುವದಿಲ್ಲ. ಪ್ರಾರ್ಥನೆಯು ಸಮೀಪದಾರಿಯಾಗಿರುವದಿಲ್ಲ. ಪ್ರಾರ್ಥನೆಯ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳಬಾರದು. ಪ್ರಾರ್ಥನೆಯು, ಎಲ್ಲಾ ಸಂಗತಿಗಳಲ್ಲಿ ಸೈತಾನನದ್ದಾಗುವಂತೆ ಹೀನ ಮಟ್ಟಕ್ಕಿಳಿಸಲ್ಪಡಬಾರದು. ಪ್ರಾರ್ಥನೆಯು ಸ್ವಾರ್ಥತೆಯಾಗಲೀ, ಹಟಮಾರಿತನವಾಗಲೀ ಆಗಬಾರದು. ಸಮೃದ್ಧಿಯನ್ನು ಪ್ರಾರ್ಥನೆಯೊಂದಿಗೆ ಜೋಡಿಸುವುದು ಗಂಡಾಂತರಕಾರಿಯಾದದ್ದಾಗಿದೆ! ಪ್ರಾರ್ಥನೆಯಿಂದ ಐಶ್ವರ್ಯಗಳನ್ನು ವಾಗ್ದಾನ ಮಾಡುವುದು ದುರಹಂಕಾರವಾದದ್ದಾಗಿದೆ. ದೇವರನ್ನು "ಸಂದೇಶವಾಹಕ ಬಾಲಕನ" ಮಟ್ಟಕ್ಕಿಳಿಸುವುದು ದೇವದೂಷಣೆಯಾಗಿದೆ. ಪ್ರಾರ್ಥನೆಯನ್ನು ಇನ್ನೊಂದು "ಹೇಗೆ ಮಾಡಬೇಕು" ಎಂಬ ಕುಶಲತಂತ್ರಗಾರಿಕೆಗೆ ಇಳಿಸುವುದು ಮೂರ್ಖತನವಾಗಿದೆ.

ಪ್ರಾರ್ಥನೆಯು ಒಂದು "ಕೊಪ್ - ಔಟ್"[1] ಆಗಿರುವದಿಲ್ಲ. "ಬಿಲ್ಲಿಗೋಟ" ಸದಸ್ಯನ ಬಳಿಗೆ ಹೋಗಿ ಅವನೊಂದೆ ಮಾತಾಡುವುದಕ್ಕಿಂತ ಅವನಿಗಾಗಿ ಪ್ರಾರ್ಥಿಸುವುದು ಹೆಚ್ಚು ಸುಲಭವಾಗಿರುತ್ತದೆ. ನಂಬಿಕೆ - ಪ್ರಾರ್ಥನೆಯು "ಯೇಸುವಿನ ಕಡೆಗೆ ತಿರುಗುವುದು" ಆಗಿರುವದಿಲ್ಲ. ಪ್ರಾರ್ಥನೆಯು ವಿಚಾರಕ್ಕಾಗಿ ಪರ್ಯಾಯವಾಗಿರುವದಿಲ್ಲ. ಪ್ರಾರ್ಥನೆಯು ಕೆಲಸಕ್ಕಾಗಿ ಬದಲಾಗಿಡುವಂಥದ್ದಲ್ಲ. ಪ್ರಾರ್ಥಿಸಲಿಕ್ಕೆ ಒಂದು ಸಮಯವಿರುವುದು! ಪ್ರಾರ್ಥಿಸುವದನ್ನು ನಿಲ್ಲಿಸಿ ಕಾರ್ಯಮಾಡಲು ಸಮಯವಿರುವುದು! ಅನೇಕರು ಪ್ರಾರ್ಥನಾ ರಿಟ್ರೀಟುಗಳಿಗೆ ಹೋಗುವರು, ಆದರೆ ಅದರ ಬಗ್ಗೆ ಏನನ್ನೂ ಮಾಡದೇ ಅದರ ಬಗ್ಗೆ ಒಳ್ಳೇ ಭಾವನೆಯೊಂದಿಗೆ ಹಿಂದಿರುವರು! ಪ್ರಾರ್ಥನೆಯು ಎಂದು

ಅಪರಾಧಿ ಮನಸ್ಸಾಕ್ಷಿಗೆ ಅಂಜನವಾಗಿರುವದಿಲ್ಲ, ದೇವರು ಮಾತ್ರವೇ *ಮಾಡಬಲ್ಲ* ಕೆಲಸಗಳಿರುವವು. *ನಾನು ಮಾತ್ರವೇ* ಮಾಡತಕ್ಕ ಕೆಲಸಗಳು ಇರುವವು. ಹೊಸತನದ ಧರ್ಮವು ಸರಳ ನಂಬಿಗಸ್ತಿಕೆಯ ಸ್ಥಾನವನ್ನು ತೆಗೆದುಕೊಳ್ಳಲಾರದು.

ಪ್ರಾರ್ಥನೆಯು ನಾವು ಒಳ್ಳೆಯದಾಗಿ ಬಾವಿಸುವಂತೆ ಮಾಡಲಿಕ್ಕಿಲ್ಲ. "ಪ್ರಾರ್ಥನೆಯಲ್ಲಿ ಉನ್ನತ ಅನುಭವಗಳ" ಬಗ್ಗೆ ಸಾಕ್ಷಿಕೊಡುವ ಪ್ರಾರ್ಥನೆಯ ಮೇಲಿನ ಪುಸ್ತಕಗಳು ಮಿಲಿಯಗಟ್ಟಲೆ ಸಂಖ್ಯೆಯಲ್ಲಿ ಇರುವವು. ಇದು ಪುಸ್ತಕಗಳನ್ನು ಮಾರಾಟ ಮಾಡಬಹುದು, ಆದರೆ ಬೈಬಲಿಗನುಗುಣವಾದದ್ದಾಗಿರುವದಿಲ್ಲ. ಬೈಬಲಿನಲ್ಲಿಯ ಜನರು "ತಮ್ಮ ಮೊಣಕಾಲುಗಳನ್ನು ಚಚ್ಚುವರು" ಇಲ್ಲವೇ "ತಮ್ಮ ಮುಖಗಳ ಮೇಲೆ ಬಿದ್ದುಕೊಳ್ಳುವರು" ಅಲ್ಲಿ ಅವರಿಗೆ "ಉನ್ನತ ಅನುಭವಗಳು" ಇರಲಿಲ್ಲ! ಯೇಸುವು ಮರಣಕರ ವೇದನೆಯಲ್ಲಿದ್ದಾಗ, ಪ್ರಾರ್ಥನೆಯಲ್ಲಿ ಬೆವರು ರಕ್ತದ ಹನಿಗಳಂತೆ ಇತ್ತು. ಆತನಿಗೆ "ಉನ್ನತ ಅನುಭವ" ಇರಲಿಲ್ಲ. ಪ್ರಾರ್ಥನೆ ಮತ್ತು "ಒಳ್ಳೆಯದಾಗಿ ಭಾವಿಸುವುದು" ಮಿಶ್ರಗೊಳ್ಳುವದಿಲ್ಲ! ಪ್ರಾರ್ಥನೆಯು ತ್ಯಾಗವಾಗಿದೆ ... ಪ್ರಾರ್ಥನೆಯು ಶ್ರಮೆಯಲ್ಲಿ ಅಂತ್ಯಗೊಳ್ಳಬಹುದು.

ಪ್ರಾರ್ಥನೆಯು ಒಬ್ಬನನ್ನು "ಧಾರ್ಮಿಕವಾಗಿ ಶ್ರೇಷ್ಠನಾಗಿರುವನು" ಎಂದು ಭಾವಿಸುವಂತೆ ಮಾಡಬಾರದು. ಕಪಟತನ ಭಕ್ತಿಯುಳ್ಳವರು, ಯೋಚಿಸುವದಕ್ಕಿಂತ, ಚರ್ಚಿಸುವದಕ್ಕಿಂತ ಇಲ್ಲವೇ ಪ್ರಾಮಾಣಿಕರಾಗಿರುವದಕ್ಕಿಂತ ಹೆಚ್ಚಾಗಿ, ಸುಮ್ಮನೆ ಇತರರನ್ನು ಕೇಳಕ್ಕಿಡುವರು: "ಅದರ ಬಗ್ಗೆ ನಾನು ಪ್ರಾರ್ಥಿಸಿದೆನು!" ಈ ಉತ್ತರದ ಅರ್ಥವು ಅವರೊಂದಿಗೆ ಒಪ್ಪಿಕೊಳ್ಳದವರು ದೇವರಿಗೆ ವಿರುದ್ಧವಾಗಿ ಹೋರಾಡುತ್ತಿರುವರು! *ಭಯಪಡಿಸುವಂಥದ್ದು!* ಬಹಳ ಧಾರ್ಮಿಕವಾಗಿ ಮಾತಾಡುವ ಜನರ ಬಗ್ಗೆ ನಾನು ಭಯಪಡುತ್ತೇನೆ. "ನಿನಗಿಂತ ಹೆಚ್ಚು ಆತ್ಮಿಕ ಮಟ್ಟದಲ್ಲಿದ್ದು, ನಾನು ಅದರ ಬಗ್ಗೆ ಪ್ರಾರ್ಥಿಸುವೆನು" ಪ್ರಾರ್ಥನೆಯ ಬಗ್ಗೆ ಕೊಚ್ಚಿಕೊಳ್ಳುವುದು ದೀನತೆಯ ಬಗ್ಗೆ ಗರ್ವದಿಂದ ಇರುವಂತೆ ಆಗಿದೆ. ತಮ್ಮ ಪ್ರಾರ್ಥನೆಗಳ ಹಿಂದೆ ಅಡಗಿಕೊಳ್ಳುವ ಅಂಥ ಜನರನ್ನು ಯೇಸುವು ಕಪಟಿಗಳೆಂದು ಹಣೆಪಟ್ಟಿಕಟ್ಟಿದ್ದಾನೆ (ಮತ್ತಾಯ 6:1-18). ಪ್ರಾರ್ಥನೆಯು ದೀನನನ್ನಾಗಿ ಮಾಡುತ್ತದೆ. ನೀವು ಹೆಚ್ಚು ಪ್ರಾರ್ಥಿಸಿದಂತೆ, ನೀವು ಹೆಚ್ಚಾಗಿ ಪ್ರಾರ್ಥಿಸುವದನ್ನು ತಿಳಿದುಕೊಳ್ಳುವಿರಿ.

ಪ್ರಾರ್ಥನೆಯು ಯುಕ್ತಿಯಿಂದ ನಿರೂಪಿಸಲು ಉಪಯೋಗಿಸಲ್ಪಡಬಹುದು. ದೂರದರ್ಶನ ಪ್ರಸಂಗಿಗಳು ಅದನ್ನು ದಿನವೂ ಮಾಡುವರು! ಅವರು ನಿಮ್ಮ ಹಣಕ್ಕಾಗಿ ಕೇಳುವರು. ಆಗ ಪ್ರಾರ್ಥನೆಯಿಂದ ನಿಮ್ಮನ್ನು ನಾಚಿಕೆ ಪಡಿಸುವರು. ನನಗಾಗಿ ಮಾಡಲಿಕ್ಕೆ ಯಾವುದೇ ಸಭೆಯನ್ನು ಕೇಳುವುದು ನನಗಾಗಿ ಪ್ರಾರ್ಥಿಸಿರಿ ಎಂದು. ಎಚ್ಚರಿಕೆಯಿಂದಿರಿ! ಕಾರ್ಯಕ್ರಮಗಳನ್ನು ಮಾರಾಟಮಾಡುವುದು ಇಲ್ಲವೇ ಅವರ ಮಾರ್ಗ ಹೊಂದಿಕೊಳ್ಳುವುದು, ಯಾವಾಗಲೂ ಶೋಧನೆಮಾಡವಂಥದ್ದು ಆಗಿರುತ್ತದೆ ಹಾಗೂ ಸಭೆಯ ನಾಯಕರಿಗೆ ಪ್ರಾರ್ಥನೆಯ ಹಿಂದೆ ಅಡಗಿಕೊಳ್ಳು ವದಾಗಿರುತ್ತದೆ. "ಅದರ ಬಗ್ಗೆ ಪ್ರಾರ್ಥಿಸಿರಿ" ಎಂಬುದು ಬೈಬಲಿನ ಅಧಿಕಾರಕ್ಕೆ ಇಲ್ಲವೇ ವಿಚಾರಕ್ಕೆ ಪರ್ಯಾಯವಾಗಿರುವದಿಲ್ಲ. "ನಿನಗಿಂತ ನಾನು ಹೆಚ್ಚು ಪರಿಶುದ್ಧನು" ಎಂಬ ಭಾವನೆಯೊಂದಿಗಿರುವ ಜನರ ಬಗ್ಗೆ ಎಚ್ಚರಿಕೆಯಿಂದ ಇರಿ. ಪ್ರಾರ್ಥನೆಯ ಮುಖಾಂತರ ಸಭೆಗಳನ್ನು ನಿಯಂತ್ರಿಸುವ ಸಹೋದರರ ಬಗ್ಗೆ ಎಚ್ಚರಿಕೆಯಿಂದಿರಿ. ಬೈಬಲಿನ ಪ್ರಾರ್ಥನೆಯು ದೇವರನ್ನಾಗಲೀ ಇಲ್ಲವೇ ಮನುಷ್ಯನನ್ನಾಗಲೀ ಯುಕ್ತಿಯಿಂದ ನಿರೂಪಿಸುವದಿಲ್ಲ. ತಪ್ಪು ರೀತಿಯಲ್ಲಿ ಉಪಯೋಗಿಸುವುದು ಯಾವಾಗಲೂ ತಪ್ಪಾಗಿರುತ್ತದೆ - ವಿಶೇಷವಾಗಿ ಪ್ರಾರ್ಥನೆಯ ಹಿಂದೆ ಅಡಗಿಕೊಳ್ಳುವುದು ತಪ್ಪಾಗಿರುತ್ತದೆ. "ಸಹೋದರ ಹೊಡ್ಜ್ ಅವರೇ, ನಾನೀಗಲೇ ನಿಮಗಾಗಿ ಪ್ರಾರ್ಥಿಸುವೆನು" ಎಂಬುದು ಅಶುಭ ಅರ್ಥವಾಗಬಹುದು, ಹೇಳಲಿಕ್ಕೆ

ಭಯಪಡಿಸುವ ಸಂಗತಿಯಾಗಿರುತ್ತದೆ.

ಪ್ರಾರ್ಥಿಸಿರಿ ... ದೇವರಿಗೆ ಪ್ರಾರ್ಥಿಸಿರಿ.

◇◇◇◇◇◇◇◇◇

# ಪ್ರಾರ್ಥನೆಯಲ್ಲಿ ಸಮಸ್ಯೆಗಳು

## ಮತ್ತಾಯ 20:20-28

*"ಅದಕ್ಕೆ ಯೇಸು - 'ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು ಎಂದು ಉತ್ತರ ಕೊಟ್ಟು ಹೇಳಿದನು' " (ಮತ್ತಾಯ 20:22ಎ).*

ನಮ್ಮ ಪ್ರಾರ್ಥನೆಗಳು ಇತರರಿಗೆ ತೊಂದರೆ ಕೊಡುತ್ತವೆಯೋ? ನಮ್ಮ ಪ್ರಾರ್ಥನೆಗಳು ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗುತ್ತಿವೆಯೋ ಇಲ್ಲವೇ ಕೆಟ್ಟ ಸಂಗತಿಗಳು ಇನ್ನೂ ಕೆಟ್ಟವುಗಳನ್ನಾಗಿ ಮಾಡುತ್ತಿರುವವೋ? ಅದನ್ನು ಎದುರಿಸೋಣ! ಕೇಳಲ್ಪಟ್ಟಂತೆ ಅನೇಕ ಪ್ರಾರ್ಥನೆಗಳು ಉತ್ತರಿಸಲ್ಪಟ್ಟಿರುವದಿಲ್ಲ! ಸಹೋದರ ಜೋನ್ಸ್‌ನ ಹೊಲವು ಹತ್ತಿಯನ್ನು ಯಾಕೆ ಉತ್ಪಾದಿಸಲಿಲ್ಲ? ಜನರು ಬಿಸಿಲಿಗಾಗಿ ಪ್ರಾರ್ಥಿಸುತ್ತಾರೆ, ಆದರೆ ಮಳೆ ಬರುತ್ತದೆ. ಜೀವಿಸುವದಕ್ಕಾಗಿ ಜನರು ಪ್ರಾರ್ಥಿಸುತ್ತಾರೆ ಆದರೆ ಅವರು ಸಾಯುತ್ತಾರೆ. ಯೇಸು ಮತ್ತು ಪೌಲ ನಿರ್ದಿಷ್ಟ ವಿಷಯಗಳಿಗಾಗಿ ಮೂರು ಸಲ ಪ್ರಾರ್ಥಿಸಿದರು; ಆದರೆ ಅಲ್ಲಗಳೆಯಲ್ಪಟ್ಟವು. ಮುಂದೆ ಯೋಚಿಸಿರಿ. ನಿಮಗೆ ಬೇಕಾದದ್ದನ್ನು ನೀವು ಹೊಂದಿಕೊಳ್ಳದಿದ್ದರೆ ಪ್ರಾರ್ಥಿಸುವದನ್ನು ಯಾಕೆ ಮುಂದುವರಿಸಬೇಕು? ಪ್ರಾರ್ಥನೆಯ ಕ್ರಮದಲ್ಲಿ ಆಶೀರ್ವಾದವನ್ನು ಬಯಸುವ ಸ್ವಾರ್ಥಿಜನರ ಪ್ರಶ್ನೆ ಇದಾಗಿದೆ! ಇತರರು - ತಾವು ದೀನರೆಂದು ಯೋಚಿಸುತ್ತ - ತಮಗೆ ಸಂಬಂಧಿಸಿದ ಆಶೀರ್ವಾದಗಳಿಗಾಗಿ ಪ್ರಾರ್ಥಿಸಲು ನಾಚಿಕೆಪಟ್ಟುಕೊಳ್ಳುತ್ತಾರೆ, ಇದು ಪ್ರಾರ್ಥನೆಯ ವಿರೋಧಾಭಾಸ, ಪ್ರಾರ್ಥನೆಯಲ್ಲಿ ಗಹನವಾದ ರಹಸ್ಯ ಆಗಿರುತ್ತದೆ.

ನಾವು ಏನನ್ನು ಕಲಿತುಕೊಂಡಿರುವೆವು? ಬಲವು ಪ್ರಾರ್ಥನೆಯಲ್ಲಿ ಇರುವುದಿಲ್ಲ, ಆದರೆ ದೇವರಲ್ಲಿ ಇರುತ್ತದೆ! ದೇವರು ಪ್ರಾರ್ಥನೆಯನ್ನು ಕೇಳುವ ಮತ್ತು ಪ್ರಾರ್ಥನೆಗೆ ಉತ್ತರಕೊಡುವ ದೇವರಾಗಿದ್ದಾನೆ. ಪ್ರಾರ್ಥನೆಯು ಬಲವುಳ್ಳದ್ದಾಗಿದೆ, ಯಾಕಂದರೆ ದೇವರು ಕೇಳುತ್ತಾನೆ ಮತ್ತು ಕಾರ್ಯಮಾಡುತ್ತಾನೆ. "ನೀನು ದೇವರನ್ನು ಹುಡುಕುವಾಗ, ನೀನು ಮಾರ್ಗದರ್ಶನ ಪಡೆಯುವಿ; ದೇವರಿಲ್ಲದೇ ನೀನು ಮಾರ್ಗದರ್ಶನವನ್ನು ಹುಡುಕುವಾಗ, ನೀನು ಏನನ್ನೂ ಪಡೆದುಕೊಳ್ಳುವದಿಲ್ಲ" ಎಂದು ಒಬ್ಬ ಬುದ್ಧಿವಂತ, ಹಳೇ ಸ್ನೇಹಿತ ಹೇಳಿದನು. ಪ್ರಾರ್ಥನೆಯು ದೇವರನ್ನು ಬದಲಾಯಿಸುವುದು ಎಂದು ಯೋಚಿಸುವುದು ದೇವರ ಬಗ್ಗೆ, ಮನುಷ್ಯನ ಬಗ್ಗೆ ಮತ್ತು ಪ್ರಾರ್ಥನೆಯ ಬಗ್ಗೆ ಅಯೋಗ್ಯವಾದ ವಿಚಾರಗಳನ್ನು ಕೊಡುತ್ತದೆ. ಮನುಷ್ಯನ ಮನಸ್ಸು ದೇವರ ಮನಸ್ಸಿಗಿಂತ ಶ್ರೇಷ್ಠವಾದದ್ದಾಗಿರುವದಿಲ್ಲ. ಪಾರಲೌಕಿಕ ತೀರ್ಮಾನದಲ್ಲಿ ಒಳಗೊಳ್ಳುವುದು ಮನಸ್ಸನ್ನು ದಿಗಿಲುಗೊಳಿಸುವಂಥದ್ದೂ, ದೀನರನ್ನಾಗಿ ಮಾಡುವಂಥದ್ದೂ, ಭಯಗೊಳಿಸುವಂಥದ್ದೂ ಆಗಿರುತ್ತದೆ. ನಾವು ಅದನ್ನು ಅರಿತುಕೊಳ್ಳೋಣ. ಅಗಾಧವಾದ ದೈವಜ್ಞಾನಶಾಸ್ತ್ರದ, ತರ್ಕಶಾಸ್ತ್ರದ, ಮತ್ತು ವ್ಯಾವಹಾರಿಕವಾದ ಸಮಸ್ಯೆಗಳು

ಪ್ರಾರ್ಥನೆಯನ್ನು ಸುತ್ತುವರಿಯುವವು. ಪ್ರಾರ್ಥನೆಯನ್ನು ಅರ್ಥಮಾಡಿಕೊಳ್ಳುವುದು ದೇವರನ್ನು ಗ್ರಹಿಸಿಕೊಳ್ಳುವುದಾಗಿದೆ. ಪ್ರಾರ್ಥನೆಯು ಎಷ್ಟೇ ಸರಳವಾಗಿದ್ದರೂ ಯಾವುದೂ ಪ್ರಾರ್ಥನೆಯ ಬಗ್ಗೆ ಸರಳವಾದದ್ದಾಗಿರುವದಿಲ್ಲ!

ದೇವರ ಸನ್ನಿಧಿಯಲ್ಲಿ ಪ್ರವೇಶಿಸುವುದಕ್ಕೆ ಸಮಯ ಬೇಕಾಗುತ್ತದೆ. ಬೈಬಲನ್ನು ಅಧ್ಯಯನ ಮಾಡಲಿಕ್ಕೆ ಸಮಯ ಬೇಕಾಗುತ್ತದೆ. ಆರಾಧಿಸಲಿಕ್ಕೆ ಸಮಯ ಬೇಕಾಗುತ್ತದೆ; ಪ್ರಾರ್ಥಿಸಲಿಕ್ಕೆ ಸಮಯ ಬೇಕಾಗುತ್ತದೆ. ಪ್ರಾರ್ಥನೆಯು ಸಹಾಯಹೀನರಿಗಾಗಿ, ದೀನರಿಗಾಗಿ ಮಾತ್ರವೇ ಇರುತ್ತದೆ. ಪ್ರಾರ್ಥನೆಯಲ್ಲಿ ನಾವು ಯೆಹೋವ ದೇವರೊಂದಿಗೆ, ವಿಶ್ವದ ಸೃಷ್ಟಿಕರ್ತನೊಂದಿಗೆ ಮಾತಾಡುತ್ತೇವೆ. ಅರಸನಿಗೆ, ಗಣ್ಯವ್ಯಕ್ತಿಗೆ, ಪ್ರಸಿದ್ಧ ನಾಯಕನಿಗೆ ಒಬ್ಬನು ಏನನ್ನು ಹೇಳಬಹುದು? ಸರ್ವಶಕ್ತನಾದ ದೇವರಿಗೆ ಒಬ್ಬನು ಏನನ್ನು ಹೇಳಬಹುದು? ಅಂಥ ಜ್ಞಾನವು ನನಗೆ ಅದ್ಭುತಕರವಾದದ್ದಾಗಿದೆ. ನಾನು ಮಾತಾಡುತ್ತೇನೆ, ಮತ್ತು ದೇವರು ಆಲಿಸುತ್ತಾನೆ! *ಆಶ್ಚರ್ಯಕರವಾದದ್ದು!* ದೇವರು ಇದನ್ನು *ಬಿಡುವದಷ್ಟೇ ಅಲ್ಲ,* ಆದರೆ ಇದನ್ನು *ಆಜ್ಞಾಪಿಸುತ್ತಾನೆ*!

## ಮನುಷ್ಯನು ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ತಿಳಿದಿರುವದಿಲ್ಲ

ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ನಾವು ತಿಳಿದಿರುವದಿಲ್ಲ. ನಾನು ಹೇಗೆ ತಿಳಿಯಬಹುದು? ಬೈಬಲು ನನಗೆ ಹಾಗೆಂದು ಹೇಳುತ್ತದೆ! "... ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲ ..." (ರೋಮಾಪುರ 8:26). ಮತ್ತಾಯ 20:20-28ನ್ನು ಜಾಗರೂಕತೆಯಿಂದ ಓದಿರಿ. ಯಾಕೋಬ ಮತ್ತು ಯೋಹಾನರಿಗೆ "ಒಂದು ಅಪೇಕ್ಷೆಗಳ ಕೆಟ್ಟ ವ್ಯವಹಾರವಿತ್ತು" ಅವರು ಸಂಚುಮಾಡಿದರು; ಅವರು ಅರಿಯದವರಂತೆ ಇದ್ದರು. ತಾವು ಬಯಸಿದ್ದನ್ನು ಮಾಡುವದರಲ್ಲಿ ತಮ್ಮ ಇಚ್ಛಿತ ತಾಯಿಯನ್ನು ಒಳಪಡಿಸಿಕೊಂಡರು. ಅದು ಬಾಲಿಶತನವಾಗಿತ್ತು; ಅದು ತಾತ್ವಿಕ ವಾಗಿ ಅಸಾಧ್ಯವಾದದ್ದಾಗಿತ್ತು; ಅದು ತಪ್ಪಾಗಿತ್ತು; ಅದು ಇತರರಿಗೆ ನೋವನ್ನುಂಟು ಮಾಡಬಹುದಾಗಿತ್ತು!

ಇದು ಜೀವನದಲ್ಲಿಯ ಒಂದು ಸತ್ಯವಾಗಿದೆ: ರಾಜಕೀಯದ ಬಗ್ಗೆ, ದೊಡ್ಡ ವ್ಯವಹಾರದ ಬಗ್ಗೆ, ಮತ್ತು ಸಭೆಯ ಸಂಗತಿಗಳ ಬಗ್ಗೆಯೂ ವ್ಯಾಖ್ಯಾನಿಸುತ್ತಾ, ಜನರು ಸತತವಾಗಿ "ತಮ್ಮನ್ನು ತಾವೇ ಮೂರ್ಖರನ್ನಾಗಿ ಮಾಡಿಕೊಳ್ಳುತ್ತಾರೆ." ನಾವು ಯಾವಾಗ ಕಲಿತುಕೊಳ್ಳುತ್ತೇವೆ? ಮನುಷ್ಯನು ಬಹಳ ಅಲ್ಪವಾದದ್ದನ್ನು - ಹೊಲಿಗೆಯುಂಗುರ ದಷ್ಟನ್ನಾದರೂ ತಿಳಿದುಕೊಂಡಿರುವದಿಲ್ಲ! "ಸಂಪಾದಕನಿಗೆ ಪತ್ರಗಳು" ವರ್ತಮಾನ ಪತ್ರಿಕೆಯಲ್ಲಿಯ ವ್ಯಂಗ್ಯ ಚಿತ್ರಗಳಿಗಿಂತ ಹೆಚ್ಚು ತಮಾಷೆಯು ಳ್ಳವುಗಳಾಗಿರುತ್ತವೆ. ಮನುಷ್ಯನು ತಿಳಿಯುವದಿಲ್ಲ, ತಿಳಿಯಲಾರನು. ಯೋಬನು ಕಠಿಣವಾದ ಮಾರ್ಗದಿಂದ ಕಲಿತುಕೊಳ್ಳಬೇಕಾಗಿತ್ತು. ಅವನು ದೇವರೊಂದಿಗೆ ವಾದಮಾಡಬಹುದೆಂದು ಯೋಚಿಸಿದ್ದನು! ಅವನು ತನ್ನ ಬಾಯಿಯನ್ನು ವಾದಗಳೊಂದಿಗೆ ತುಂಬಿಸಿಕೊಂಡಿದ್ದನು. ಆಗ ದೇವರು ಬಂದನು! ದೇವರು ಪ್ರಶ್ನಿಸುವದನ್ನು ಮಾಡಿದನು. ಜೀವನವನ್ನು ಕುರಿತ ಒಂದು ಮೂಲವಾದ ಪ್ರಶ್ನೆಗೂ ಯೋಬನು ಉತ್ತರಕೊಡಲಾರದಾದನು. ಯೋಬನು ಮಾನಸಾಂತರ ಪಟ್ಟನು (ಯೋಬ 40:3-5; 42:1-6). ಯೋಬನು ತನ್ನ ಪಾಠವನ್ನು ಚೆನ್ನಾಗಿ ಕಲಿತನು. ದೇವರು ದೇವರಾಗಿದ್ದಾನೆ ಮತ್ತು ಮನುಷ್ಯನು ಮನುಷ್ಯನಾಗಿದ್ದಾನೆ.

ಹೀಗಿದ್ದರೂ, ದೇವರು ತನ್ನ ಕಾರ್ಯದೊಳಗೆ ಮನುಷ್ಯನನ್ನು ಸ್ವಾಗತಿಸುತ್ತಾನೆ. ದೇವರು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಾ ಇರುವುದರೊಂದಿಗೆ ಪರಲೋಕವು

ಒಂದು ನಿತ್ಯವಾದ ಪ್ರಶ್ನಾವಳಿ ಕಾರ್ಯಕ್ರಮ ಎಂದು ಅನೇಕರು ಯೋಚಿಸುತ್ತಾರೆ! ಅದನ್ನು ಒತ್ತಿ ಹೇಳಬೇಡಿರಿ! "ದೇವರನ್ನು ಸಂದರ್ಶಿಸುವರೆಗೆ - ಆತನಿಗೆ ಕೇಳಲು ನನಗೆ ಒಂದು ಸಾವಿರ ಪ್ರಶ್ನೆಗಳಿದ್ದವು" ಎಂದು ಒಬ್ಬನು ಹೇಳಿದನು. ದೇವರನ್ನು ಕಂಡು ಕೊಳ್ಳುವುದು ಮತ್ತು ದೇವರು ಏನನ್ನು ಬಯಸುತ್ತಾನೆಂಬುದನ್ನು ಕಂಡುಕೊಳ್ಳುವುದು ನಮ್ಮ ಅಪೇಕ್ಷೆಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ. ಪ್ರಾರ್ಥನೆಯು ಬಾಲಿಶ ಬೇಡಿಕೆಗಳಿಗೆ ಕೆಳಗಿಳಿಸಲ್ಪಡಬಾರದೆಂದು ಯಾಕೋಬ ಮತ್ತು ಯೋಹಾನರು ಕಲಿತುಕೊಳ್ಳ ಬೇಕಾಗಿತ್ತು. ಕುಟುಂಬವು ತನ್ನ ಸೌಲಭ್ಯಗಳೊಂದಿಗೆ ಪ್ರಾರ್ಥನೆಯನ್ನು ದುರುಪಯೋ ಗಪಡಿಸಿಕೊಳ್ಳಬಾರದು. ದೇವಜನರೂ ಸಹ ದೇವರನ್ನು ಯುಕ್ತಿಗೆ ಒಳಪಡಿಸಲು ಪ್ರಯತ್ನಿಸಬಾರದು. ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳಲು ಮತ್ತು ಉತ್ತರಕೊಡಲು ಬಯಸುತ್ತಾನೆ. ನಾವು ಪ್ರಾರ್ಥನೆಯಲ್ಲಿ ದೇವರನ್ನು *ತಿಳಿಯಲು* ಬಯಸತಕ್ಕದ್ದು, ಆದರೆ ದೇವರನ್ನು ಉಪಯೋಗಿಸಬಾರದು. ದೇವರು ನಮಗಿಲ್ಲದೇ, ದೇವರ ಬಲಕ್ಕೆ ನಮಗೆ ಮಾರ್ಗವಿರುವದಿಲ್ಲ. ಇದು ವಿವಾದವಾಗಿದೆ.

ಕೆಲವು ಪ್ರಾರ್ಥನೆಗಳು ಯಾಕೆ ಉತ್ತರಿಸಲ್ಪಡುತ್ತವೆ ಮತ್ತು ಇತರವುಗಳು ಯಾಕೆ ತಿರಸ್ಕರಿಸಲ್ಪಟ್ಟಿವೆ ಎಂಬುದನ್ನು ತಿಳಿಯಲಿಕ್ಕೆ ದೇವರ ಮನಸ್ಸು (ಸರ್ವಜ್ಞಾನ) ಇರುವುದಾಗಬೇಕಾಗುತ್ತದೆ. ರಹಸ್ಯ ಸಂಗತಿಗಳು ದೇವರಿಗೆ ಒಳಪಟ್ಟಿರುತ್ತವೆ (ಧರ್ಮೋಪದೇಶಕಾಂಡ 29:29). ಆಕಾಶಗಳು ಭೂಮಿಗಿಂತ ಇನ್ನೂ ಹೆಚ್ಚು ಎತ್ತರದಲ್ಲಿವೆ. ದೇವರು ಸೃಷ್ಟಿಕರ್ತನು; ನಾವು ಸೃಷ್ಟಿಸಲ್ಪಟ್ಟವರು. ಪ್ರಾರ್ಥನೆಯನ್ನು ಗ್ರಹಿಸಿಕೊಳ್ಳುವುದು ದೇವರಾಗಿರುವುದಾಗಿದೆ. ಇದಲ್ಲದೇ, ಮನುಷ್ಯನು ಎಲ್ಲವನ್ನೂ ತಿಳಿದುಕೊಂಡರೆ, ಯಾಕೆ ಪ್ರಾರ್ಥಿಸಬೇಕು? ನಾವು ದೇವರಲ್ಲಿ ನಂಬಿಕೆಯಿಡುತ್ತೇ ವೆಯೋ ಇಲ್ಲವೇ ಪ್ರಾರ್ಥನೆಯ ನಮ್ಮ ವಿಗ್ರಹಾರಾಧಕ ತತ್ವದಲ್ಲಿ ನಂಬಿಕೆ ಇಡುತ್ತೇ ವೆಯೋ? ನಾವು ದೇವರಲ್ಲಿ ನಂಬಿಕೆಯಿಟ್ಟರೆ, ಆಗ ನಾವು ಪ್ರಾರ್ಥಿಸುವೆವು ಮತ್ತು ಶಾಂತಚಿತ್ತದಿಂದ ಕಾದುಕೊಂಡಿರುವೆವು. ಮನುಷ್ಯನಿಗೆ ದೇವರ ಅಗತ್ಯತೆಯಿದೆ ... ವಿವರಣೆಗಳಲ್ಲ. ಮನುಷ್ಯನ "ಕಡಲೆಕಾಯಿ" ಮೆದುಳು ವಿವರಣೆಯನ್ನು ಹಿಡಿದುಕೊಳ್ಳ ಲಾರದು. ದೇವರು ಯೋಬನಿಗೆ ಯಾವುದೇ ಸಂಗತಿಯನ್ನು ವಿವರಿಸಲಿಲ್ಲ - ಆದರೆ ಆತನು ಬಂದನು. ಯೋಬನಿಗೆ ದೇವರ ಅಗತ್ಯತೆಯಿತ್ತು - ಉತ್ತರಗಳಲ್ಲ. ನಮಗೆ ದೇವರ ಅಗತ್ಯೆತೆಯಿದೆ. ದೇವರು ದೇವರೇ ಆಗಿದ್ದುದರಿಂದ ದೇವರು ಹೇಗೆ ಇಲ್ಲವೇ ಯಾಕೆ ಪ್ರಾರ್ಥನೆಗೆ ಉತ್ತರವನ್ನು ಕೊಡುವನು ಎಂದು ತಿಳಿಯುವುದು ನಿಜವಾ ಗಿಯೂ ನಮ್ಮ ವ್ಯವಹಾರವಾಗಿದೆಯೋ? ನಮ್ಮ ಯೋಚಿಸುವಿಕೆಯಿಲ್ಲದೇ, ಇಲ್ಲವೇ ನಮ್ಮ ಯೋಚಿಸುವಿಕೆಯನ್ನು ಹೊರತುಪಡಿಸಿ ದೇವರು ನಮ್ಮನ್ನು ನಡಿಸುವದಿಲ್ಲ. ಆದರೆ ನಮ್ಮ ಯೋಚನೆಯ ಮುಖಾಂತರ ನಡಿಸುತ್ತಾನೆ. "ನೀವು ಧ್ವನಿಸುರುಳಿಗಳನ್ನು ಕೇಳಬಹುದು, ಪುಸ್ತಕಗಳನ್ನು ಓದಬಹುದು ಮತ್ತು ಪ್ರಾರ್ಥನಾ ಸಮ್ಮೇಳನಗಳಿಗೆ ಹೋಗಬಹುದು; ಆದರೆ ನೀವು ಪ್ರಾರ್ಥಿಸಲು ಪ್ರಾರಂಭಿಸುವಾಗ, ಮಾತ್ರವೇ ನೀವು ಪ್ರಾರ್ಥಿಸುವದನ್ನು ಕಲಿತುಕೊಳ್ಳುವಿರಿ" ಎಂದು ಒಬ್ಬರು ಗಮನಿಸಿದ್ದಾರೆ. ನಮ್ಮನ್ನು ಪ್ರಾರ್ಥನೆಯೊಳಗೆ ಇಲ್ಲವೇ ಪ್ರಾರ್ಥನೆಯ ಹೊರಗೆ ತತ್ವವಿಚಾರವಾಗಿ ಮಾಡಿಕೊಳ್ಳಬಾರದು. ಪರಿಶುದ್ಧ ಬರಹಗಳ ತಳಹದಿಯ ಮೇಲೆ, ದೇವರು ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಟ್ಟಿದ್ದಾನೆಂದು ದೃಢತೆ ಹೊಂದಿಕೊಳ್ಳುವವರೆಗೆ ಪ್ರಾರ್ಥಿಸಿರಿ ... ಪ್ರಾರ್ಥಿಸಿರಿ ... ಪ್ರಾರ್ಥಿಸಿರಿ.

## ಮನುಷ್ಯನು ಸಾಮಾನ್ಯವಾಗಿ ತಾನು ಏನು ಹೇಳುತ್ತಾನೆಂಬುದನ್ನು ತಿಳಿಯುವದಿಲ್ಲ

ಅಷ್ಟು ಅಲ್ಪವಾದದ್ದರ ಮೇಲೆ ಗಮನಹರಿಸುವದರಿಂದ ನಾವು ಬಹಳವಾದದ್ದನ್ನು ಕಳೆದುಕೊಳ್ಳುವೆವು! ಯೇಸುವು ಯಾಕೋಬನನ್ನೂ ಯೋಹಾನನನ್ನೂ ಗದರಿಸಿದನು. ಹೀಗಿದ್ದರೂ, ಮೊದಲನೆಯ ಸಲದಂತೆ ಮತ್ತಾಯ 20:20-28ನ್ನು ಓದಿರಿ. ತಾಯಿ ಮತ್ತು ಮಕ್ಕಳು ಯೇಸುವಿನ ಬಳಿಗೆ ಬಂದರು ಮತ್ತು ಯೇಸುವನ್ನು ಆರಾಧಿಸಿದರು. ಮನುಷ್ಯನು ತನ್ನ ಉತ್ತಮತೆಯಲ್ಲಿಯೂ ಸೋತುಹೋಗುತ್ತಾನೆ! ಯಾರೂ ಪರಿಪೂರ್ಣರಾಗಿರುವದಿಲ್ಲ. ಅವರು ಕೇಳಿದರು. ಯೇಸುವಿನ ಉತ್ತರವನ್ನು ಗಮನಿಸಿರಿ: "ನಿಮಗೇನು ಬೇಕು?" (ಮತ್ತಾಯ 20:21). ಯೇಸುವು ಕೇಳಲ್ಪಡಬೇಕು ಎಂಬುದನ್ನು ಬಯಸುತ್ತಾನೆ; ಆತನು ನಮಗೆ ಕೊಡಲು ಬಯಸುತ್ತಾನೆ. ಯೇಸುವಿನ ಬಳಿಗೆ ಬರುವುದು, ಯೇಸುವನ್ನು ಕೇಳುವುದು ತಪ್ಪಾದದ್ದಾಗಿರುವದಿಲ್ಲ.

ಯೇಸುವಿನ ಗದರಿಸುವಿಕೆಯೂ ಗಂಭೀರವಾದದ್ದೂ ಕಠಿಣವಾದದ್ದೂ ಆಗಿತ್ತು: "ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು" (ವಚನ 22ಎ). ಎರಡು ಮೂಲಕಾರಣಗಳಿಗಾಗಿ ಯೇಸುವು ಅವರ ಬೇಡಿಕೆಯನ್ನು ತಿರಸ್ಕರಿಸಿದನು: (1) ಅವರ ಬೇಡಿಕೆಯು ಅವರನ್ನೂ ಇತರರನ್ನೂ ಒಂದಾಗಿ ತೊಂದರೆಗೆ ಗುರಿಮಾಡುವುದು, ಮತ್ತು (2) ಅದು ತಾತ್ವಿಕವಾಗಿ ಅಸಾಧ್ಯವಾದದ್ದಾಗಿತ್ತು. ದೇವರು ಯೇಸುವಿಗೆ ಸಿಂಹಾಸನವನ್ನು ಕೊಡಲಿಲ್ಲ ಆದರೆ ಶಿಲುಬೆಯನ್ನು ಕೊಟ್ಟನು. ಉಳಿದ ಶಿಷ್ಯರು ಯಾಕೋಬ ಮತ್ತು ಯೋಹಾನರ ಬೇಡಿಕೆಗಾಗಿ ಸಿಟ್ಟುಗೊಂಡಿದ್ದರು! "ಆಗಲಿ" ಎಂದು ಅವರ ಬಯಕೆಗಳಿಗೆ ಉತ್ತರಕೊಡುವುದು. "ಸಭೆಯನ್ನು ಒಡೆಯಬಹುದಿತ್ತು." ಅನೇಕ ಸಲ ನಮ್ಮ ಪ್ರಾರ್ಥನೆಗಳು ಅಲ್ಲಗಳೆಯಲ್ಪಟ್ಟಾಗಿ ಅತ್ಯುತ್ತಮವಾಗಿ ಉತ್ತರಿಸಲ್ಪಡುತ್ತವೆ. ಅಂಥದ್ದು ಅವರ ವಿಷಯವಾಗಿತ್ತು. "ಉತ್ತರಿಸಲ್ಪಡದವುಗಳಿಗಿಂತ ಹೆಚ್ಚಾಗಿ ಉತ್ತರಿಸಲ್ಪಟ್ಟ ಪ್ರಾರ್ಥನೆಗಳ ಮೇಲೆ ಹೆಚ್ಚಾಗಿ ಕಣ್ಣೀರು ಸುರಿಸಲ್ಪಟ್ಟಿವೆ" ಎಂದು ಯಾರೋ ಒಬ್ಬರು ಗಮನಿಸಿದ್ದಾರೆ. "ಇಲ್ಲ" ಎಂದು ಉತ್ತರಕೊಟ್ಟಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವಷ್ಟು ದೀರ್ಘಕಾಲ ನಾನು ಜೀವಿಸಿದ್ದೇನೆ. ಸ್ವಾರ್ಥದ, ವಿಚಾರ ಮಾಡದ ಪ್ರಾರ್ಥನೆಗಳು ನಮಗೆ ನೋವನ್ನುಂಟು ಮಾಡುತ್ತವೆ. ಚಿಕ್ಕ ಮಕ್ಕಳು ಬಹಳಷ್ಟು ಕ್ಯಾಂಡಿಯನ್ನು ಬಯಸುವಂತೆ ನಮ್ಮನ್ನು ಮಾಡುವಂತೆ ಕೇಳಿಸುತ್ತದೆ.

ಪಠ್ಯವನ್ನು ಮುಂದೆ ಓದಿರಿ. ಮಕ್ಕಳಿಗೆ ಮಹಿಮೆಯಿಲ್ಲ, ಆದರೆ ತ್ಯಾಗವು ತೋರಿಸಲ್ಪಟ್ಟಿತು. *ಯಶಸ್ವಿಯಾದ ಪ್ರಾರ್ಥನೆಯು ನಾವು ದೇವರಿಂದ ಏನನ್ನು ಪಡೆಯುತ್ತೇವೆಯೋ ಅದಲ್ಲ, ಆದರೆ ದೇವರು ನಮ್ಮಿಂದ ಏನನ್ನು ಪಡೆಯುತ್ತಾನೋ ಅದಾಗಿದೆ.* ಈ ಗಮನಿಸುವಿಕೆಯು ನಮ್ಮ ಪ್ರಾರ್ಥನಾ ಜೀವಿತಗಳಲ್ಲಿ ನಿರ್ಣಾಯಕವಾದದ್ದಾಗಿದೆ. ದೇವರಿಗೆ ಪ್ರಾರ್ಥನೆಯು ನಮ್ಮನ್ನು ಒಳ್ಳೆಯದಾಗಿ ಭಾವಿಸುವಂತೆ ಮಾಡಲು ರೂಪಿಸಲ್ಪಟ್ಟಿರುವದಿಲ್ಲ - ಅದು ನಮ್ಮನ್ನು ದೀನರನ್ನಾಗಿ ಇಡಲು ರೂಪಿಸಲ್ಪಟ್ಟಿದೆ. ಪ್ರಾರ್ಥನೆಯು ಎಂದೂ ಕಾರ್ಯ ಮಾಡುವದಕ್ಕೆ, ಯೋಚಿಸುವದಕ್ಕೆ, ಕಾಯುವದಕ್ಕೆ ಶ್ರಮೆತಾಳುವದಕ್ಕೆ, ಇಲ್ಲವೇ ಕೊಡುವದಕ್ಕೆ ಪರ್ಯಾಯವಾದದ್ದಾಗಿರುವದಿಲ್ಲ. ಈ ಎಲ್ಲಾ ಪ್ರಯತ್ನಗಳಿಗೆ ಪ್ರಾರ್ಥನೆಯು ಅಸ್ತಿವಾರವಾಗಿದೆ. ಪ್ರಾರ್ಥನೆಯಲ್ಲಿ ದೇವರು ನಮ್ಮಲ್ಲಿರುವ ಅತ್ಯುತ್ತಮವಾದದ್ದು ಹೊರಗೆ ಬರುವಂತೆ ಬಿಡುತ್ತಾನೆ.

ಯಾಕೋಬ ಮತ್ತು ಯೋಹಾನರು ಯೇಸುವಿನಿಂದ "ಗುಡುಗಿನ ಮರಿಗಳು" ಎಂದು ಹೆಸರನ್ನು ಹೊಂದಿದ್ದರೂ (ಮಾರ್ಕ 3:17). ಸಮಯ ಮತ್ತು ಪ್ರಬುದ್ಧ

ತೆಯು ಅವರು ತಿಳಿಯಲ್ಪಟ್ಟ ಮಾರ್ಗವನ್ನು ಬದಲಾಯಿಸಿತು. ಯಾಕೋಬನು ಹತಸಾಕ್ಷಿಯಾದ ಮೊದಲನೆಯ ಅಪೊಸ್ತಲನು. ಯೋಹಾನನು ಮೆಚ್ಚಿಕೆಯ "ಪ್ರೀತಿಯ ಅಪೊಸ್ತಲ"ನಾದನು. ಪ್ರಾಮಾಣಿಕತೆಯಲ್ಲಿ ನಾವು ಒಮ್ಮೆ ಅಪೇಕ್ಷಿಸಿದ್ದನ್ನು ಭಯಾನಕತೆಯಲ್ಲಿ ಹಿಂದಿರುಗಿ ನೋಡುತ್ತೇವೆ. ಒಮ್ಮೆ ನಾವು ಆಶೆಮಾಡಿದ್ದು ಈಗ ಅಸಹ್ಯಕರವಾದದ್ದಾಗಿದೆ. ಪ್ರಾರ್ಥನೆಯು ನಮ್ಮನ್ನು ಪ್ರಬುದ್ಧರನ್ನಾಗಿ ಮಾಡುವದರಿಂದ ಪ್ರಾರ್ಥನೆಯು ನಮ್ಮನ್ನು ಬದಲಾಯಿಸುತ್ತದೆ.

## ನಾವು ಕೇಳುವದಕ್ಕಿಂತ ಮೊದಲು ದೇವರು ತಿಳಿದಿರುತ್ತಾನೆ

ಪ್ರಾರ್ಥನೆಯಲ್ಲಿ ನಂಬುವದಕ್ಕಾಗಿ ಒಬ್ಬನು ಆಳವಾಗಿ ಯೋಚಿಸತಕ್ಕದ್ದು ಮತ್ತು ಪ್ರಾಮಾಣಿಕನಾಗಿರತಕ್ಕದ್ದು. ನಾವು ಕೇಳುವದಕ್ಕಿಂತ ಮೊದಲು ದೇವರು ತಿಳಿದುಕೊಂಡಿರುವನು. ನಾಸ್ತಿಕನು "ಯಾಕೆ ಪ್ರಾರ್ಥಿಸಬೇಕು" ಎಂದು ಕೇಳುವನು. ಇದು ಪ್ರಾರ್ಥನೆಗಾಗಿ ಪೂರ್ಣವಾದ ಕಾರಣವಾಗಿರುವುದು: "... ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬುದು ಆತನಿಗೆ ತಿಳಿದದೆ" (ಮತ್ತಾಯ 6:8, 32; ಲೂಕ 12:30). ಪ್ರಾರ್ಥನೆಯು ಮಕ್ಕಳು ತಂದೆಯನ್ನು ಸುತ್ತುವರಿದಿರುವುದು ಎಂದು ಯೇಸು ಹೇಳಿದನು (ಮತ್ತಾಯ 7:11; ಲೂಕ 11:13). ತಮ್ಮ ಮಕ್ಕಳು ಬಹಳವಾಗಿ, ಸತತವಾಗಿ ತಮ್ಮನ್ನು ಹುಡುಕುವವರೆಗೆ ತಂದೆತಾಯಿಗಳಿಂದ ಅವರಿಗೆ ಅನೇಕ ಬಹುಮಾನಗಳು ಕೊಡಲ್ಪಡುವದಿಲ್ಲ.

"ಬೇಡಿ ಕೊಳ್ಳಿರಿ, ಹುಡುಕಿರಿ, ತಟ್ಟಿರಿ" ಎಂದು ಸಹ ಯೇಸು ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ. ಪ್ರಾರ್ಥನೆಯು ಯಾಂತ್ರಿಕವಾದದ್ದೂ, ಧಾರ್ಮಿಕ ಮಂತ್ರತಂತ್ರವೂ ಆಗಿರುವದಿಲ್ಲ. ಅನೇಕ ತಂದೆತಾಯಿಗಳು ತಮ್ಮ ಮಕ್ಕಳಿಗೆ ಬಹಳಷ್ಟನ್ನು ಬಹಳ ಬೇಗನೇ ಕೊಡುತ್ತಾರೆ. ಅವರು ದೊಡ್ಡವರಾಗುವಾಗ, ನಿಜವಾದ ಜೀವನಕ್ಕೆ ಕೆಟ್ಟದ್ದಾಗಿ ಸಿದ್ಧ ಪಡಿಸಲ್ಪಟ್ಟಿರುವರು. ದೇವರು "ಸಂತಾಕ್ಲಾಸ" ಆಗಿರುವದಿಲ್ಲ. ಜವಾಬ್ದಾರಿಕೆಯಿಲ್ಲದ ಅಪೇಕ್ಷೆಗಳು ಕೊಡಲ್ಪಟ್ಟಾಗ ಹಾನಿಕರವಾದವುಗಳಾಗಿರುತ್ತವೆ. ಪ್ರಾರ್ಥನೆಯಲ್ಲಿ ಅಗಾಧವಾದ ಒತ್ತಾಯವು ಇರುತ್ತದೆ ... ಬಾಲಿಶ ಭಾವವಲ್ಲ. ಮಗುವಿಗೆ ಅವನು ಬಯಸುವದೆಲ್ಲವನ್ನೂ ಕೊಡುವುದು ಬೇಸರಕ್ಕೆ ನಡಿಸುತ್ತದೆ. ಯಾವುದಕ್ಕಾಗಿ ನಾವು ಕೆಲಸಮಾಡಲು ಸಿದ್ಧರಾಗಿಲ್ಲವೋ ಅದನ್ನು ಸ್ವೀಕರಿಸುವದಕ್ಕಾಗಿ ಪ್ರಾರ್ಥಿಸಬಾರದು. ಇಂದು ಬಹಳ ಜನರು ತ್ಯಾಗವಿಲ್ಲದೆ ಕೊಡುತ್ತಾರೆ, ಉಪವಾಸ ಮಾಡದೇ ಪ್ರಾರ್ಥಿಸುತ್ತಾರೆ ಮತ್ತು ಕಣ್ಣೀರಿಲ್ಲದೇ ಸುವಾರ್ತೆ ಸೇವೆ ಮಾಡುತ್ತಾರೆ. ಅದು ಕೆಲಸ ಮಾಡುವದಿಲ್ಲ! ಪ್ರಾರ್ಥನೆಯ ದೊಡ್ಡ ಸಮೀಕ್ಷೆಗಳಲ್ಲಿ ಒಂದು ಪ್ರಾರ್ಥನೆಯ ನಂತರ ನಾವು ಏನು ಮಾಡುತ್ತೇವೆ ಎಂಬುದು ಪ್ರಾರ್ಥನೆಯು ಶಿಸ್ತು ಕ್ರಮವಾಗಿದೆ.

ನಮ್ಮಲ್ಲಿ ಹೆಚ್ಚಾದವರು ದೇವರು ಒಂದೇ ಮಾರ್ಗದಲ್ಲಿ ಮಾತ್ರವೇ ಕಾರ್ಯಮಾಡುವನೆಂದು ಯೋಚಿಸುವುದು ದುಃಖಕರವಾದದ್ದಾಗಿದೆ. ಕೆಲವು ಸಲ ಪರಿಸ್ಥಿತಿಗಳು ಉತ್ತಮವಾಗುವ ಮೊದಲು ಹೆಚ್ಚು ಕೆಟ್ಟುಹೋಗುತ್ತವೆ ಎಂದು ಬೈಬಲು ನಮಗೆ ಹೇಳುತ್ತದೆ. ಇದು ಶಿಲುಬೆಯ ಸತ್ಯವಾಗಿದೆ. ಶಿಲುಬೆಯಿಲ್ಲ - ಕಿರೀಟವಿಲ್ಲ. ನಾವು ನಿರೀಕ್ಷಿಸುವುದಕ್ಕೆ ವಿರುದ್ಧವಾದದ್ದನ್ನು ದೇವರು ಮಾಡಲೂಬಹುದು. ನಂಬಿಕೆಯಲ್ಲಿ ಒಂದು ಮೂಲತತ್ವವು ದೇವರಿಂದ ಅನೀರಿಕ್ಷಿತವಾದದ್ದಕ್ಕಾಗಿ ಸಿದ್ಧರಾಗಿರುವುದು. ಕತ್ತಲೆಯಲ್ಲಿ ದೇವರನ್ನು ನಂಬಬಹುದೋ? ದೇವರು ಬರಿದಾದ ಮತ್ತು ತರೆದ ಹಸ್ತಗ

ಳನ್ನು ಕಂಡುಕೊಳ್ಳುವಲ್ಲಿ ಮಾತ್ರವೇ ಕೊಡಬಲ್ಲನು *ಅನುದಿನದ* ಜೀವನಕ್ಕಿಂತ *ನಿತ್ಯ ಜೀವಕ್ಕಾಗಿ* ದೇವರನ್ನು ನಂಬುವುದು ಸುಲಭವಾಗಿರುವಂತೆ ತೋರುತ್ತದೆ.

ಇತರರು, ಸುಳ್ಳು ದೀನತೆಯಲ್ಲಿ, "ದೇವರಿಗೆ ತೊಂದರೆ ಕೊಡಲು" ಬಯಸುವದಿಲ್ಲ, ಮುಂದೆ ಹೋಗಿರಿ ಮತ್ತು ಆತನನ್ನು ತೊಂದರೆ ಪಡಿಸಿರಿ! ತಂದೆತಾಯಿಗಳು ತಮ್ಮ ಮಕ್ಕಳಿಂದ ತೊಂದರೆಪಡಿಸಲ್ಪಡುವದನ್ನು ಬಯಸುತ್ತಾರೆ! ತಮ್ಮ ಮಕ್ಕಳು ಬೆಳೆಯುವದನ್ನು ಮತ್ತು ಪ್ರಬುದ್ಧರಾಗುವದನ್ನು ಗಮನಿಸುವದರಲ್ಲಿ ತಂದೆತಾಯಿಗಳು ಆನಂದ ಪಡುತ್ತಾರೆ. ದೇವರಿಗಾಗಿ ಯಾವುದೂ ಬಹಳ ಸದ್ಗುಣದಾಗಿರುವದಿಲ್ಲ; ದೇವರಿಗೆ ಯಾವುದೂ ಬಹಳ ದೊಡ್ಡದಾಗಿರುವದಿಲ್ಲ, ಪ್ರಾರ್ಥನೆಗಾಗಿ ಅತಿ ಸಣ್ಣದಾಗಿರುವ ಯಾವುದೇ ಸಂಗತಿಯು ಅದರ ಮೇಲೆ ಚಿಂತಿಸಲಿಕ್ಕೆ ಭಾರವಾಗಿರಲು ಬಹಳ ಸಣ್ಣದಾಗಿರುತ್ತದೆ. ಯಾವುದಾದ ರೊಂದು ದೇವರಿಗಾಗಿ ಬಹಳ ದೊಡ್ಡಸಂಗತಿಯಾಗಿರುವುದು ಎಂದು ಯೋಚಿಸುವುದು ವಿಶ್ವಾಸದ ಕೊರತೆಯಾಗಿರುತ್ತದೆ.

> ಭಯಪಡಬೇಡ ಪ್ರಾರ್ಥಿಸಲು; ಪ್ರಾರ್ಥಿಸುವುದು ಹಕ್ಕು ಆಗಿರುತ್ತದೆ;
> ನಿನಗೆ ಸಾಧ್ಯವಿದ್ದರೆ ಪ್ರಾರ್ಥಿಸು ನಿರೀಕ್ಷೆಯಿಂದ, ಆದರೆ ಯಾವಾಗಲೂ ಪ್ರಾರ್ಥಿಸು,
> ನಿರೀಕ್ಷೆಯು ಬಲಹೀನವಾಗಿದ್ದರೂ, ಇಲ್ಲವೇ ದೀರ್ಘವಿಳಂಭದಂದ ರೋಗಿಯಾಗಿದ್ದರೂ.
> ಬೆಳಕು ಇಲ್ಲದಿದ್ದರೆ ಕತ್ತಲೆಯಲ್ಲಿ ಪ್ರಾರ್ಥಿಸು;
> ಮತ್ತು ಯಾವುದೇ ಅಪೇಕ್ಷೆಗಾಗಿ ನೀನು ಪ್ರಾರ್ಥಿಸಲು ಧೈರ್ಯಗೊಳ್ಳದಿದ್ದರೆ,
> ಆಗ ಪ್ರಾರ್ಥಿಸು ದೇವರಿಗೆ ಆ ಅಪೇಕ್ಷೆಯನ್ನು ತೆಗೆದು ಹಾಕಲು!

## ಮನುಷ್ಯನು ದೇವರನ್ನು ಬದಲಾಯಿಸಬಹುದೋ?

ಸರ್ವಶಕ್ತನಾದ ದೇವರನ್ನು ಮನುಷ್ಯನು ಬದಲಾಯಿಸಬಹುದೋ? ಎಂಥಾ ಭಯಭಕ್ತಿಯುಳ್ಳ, ಪರಿಶುದ್ಧ ಅವಕಾಶ! ನನಗೆ ಹೆಚ್ಚು ಉತ್ತಮವಾದ ಉತ್ತರಗಳಿರಬೇ ಕೆಂದು ಬಯಸುತ್ತಾನೆ! ಮಿತಿಯುಳ್ಳ, ದೋಷವುಳ್ಳ, ಬಿದ್ದುಹೋಗುವ ಮನುಷ್ಯನು, ಬಿದ್ದು ಹೋಗದ ದೇವರನ್ನು ಬದಲಾಯಿಸಬಹುದೋ? *ವಿಚಾರವು ಅಸಂಬದ್ಧವಾ ಗಿದೆಯೋ?* ಮೋಶೆಯು ವಿಮೋಚನಕಾಂಡ 32:14ರಲ್ಲಿ ಮಾಡಿದನು. ಹಿಜ್ಕೀಯನು 2 ಅರಸುಗಳು 20:1-6ರಲ್ಲಿ ಮಾಡಿದನು! ಇತರರು ಪ್ರಾರ್ಥಿಸಿದರು ಮತ್ತು ಮಹಿಮೆಯುಳ್ಳ ಉತ್ತರಗಳನ್ನು ಪಡೆದುಕೊಂಡರು. ದೇವರ ದೀನತೆ! ದೇವರ ಅಪಾಯ! ಎಂಥಾ ದೇವರು! ಇತರರು, ನಮ್ಮ ಪಠ್ಯದಲ್ಲಿಯ ಯಾಕೋಬ ಮತ್ತು ಯೋಹಾನನಂಥವರು ಸೋತು ಹೋದರು. ಮನುಷ್ಯನು ದೇವರಿಗೆ ಒಂದು ಸೂಚನೆಯನ್ನಾದರೂ ಮಾಡುವ ವಿಚಾರವೇ ಅಗ್ರಾಹ್ಯವಾದದ್ದಾಗಿದೆ. ಹೀಗಿದ್ದರೂ ಪ್ರಾರ್ಥನೆಯು ಮೂಢ ನಂಬಿಕೆಯಾಗಿರುವದಿಲ್ಲ. ದೇವರು ಮಂತ್ರಗಾರನಾಗಿರುವದಿಲ್ಲ. ಇಲ್ಲವೇ ಒಂದು ಇನ್ಶೂರನ್ಸ್ ಕಂಪನಿಯೂ ಆಗಿರುವದಿಲ್ಲ. ಬುದ್ಧಿವಂತ ತಂದೆತಾಯಿಗಳು ತಮ್ಮ ಮಕ್ಕಳ ಬೇಡಿಕೆಗಳನ್ನು ಬಯಸುತ್ತಾರೆ. ಆದರೆ ಅವು ದುರುಪಯೋಗದಿಂದ ನಿರಾ ಕರಿಸಲ್ಪಟ್ಟಿವೆ. ದೇವರು ಒಡವೆಗಳನ್ನು, ವಿಗ್ರಹಗಳನ್ನು ಮತ್ತು ಬಾಲಿಶ ವಾಗ್ದಾನಗಳನ್ನು ಅಸಹ್ಯಿಸುತ್ತಾನೆ. ದೇವರು ವಿಗ್ರಹಗಳಲ್ಲಿ ಇಲ್ಲವೇ ಎಣಿಸುವ ಮಣಿಗಳಲ್ಲಿ ಇರುವದಿಲ್ಲ.

ಪ್ರಾರ್ಥನೆಯು ಚರ್ಚೆಯಾಗಿರುವದಿಲ್ಲ. ಮನುಷ್ಯನು ದೇವರನ್ನು ಆತನ ಚಿತ್ತಕ್ಕೆ ವಿರುದ್ಧವಾಗಿರುವಂಥದ್ದರಲ್ಲಿ ಮಾತಾಡಲಾರನು. ದೇವರು ಮನಸ್ಸಿಲ್ಲದವನಾಗಿರುವದಿಲ್ಲ

- ಆತನು ಇಷ್ಟವುಳ್ಳವನಾಗಿದ್ದಾನೆ. "ದೇವರ ಬಗ್ಗೆ ಕೀಳಾಗಿ" ಮಾತಾಡಲು ನಾವು ಪ್ರಯತ್ನಿಸಬಾರದು. ಆದರೆ "ನಮ್ಮನ್ನು ಮೇಲಕ್ಕೆ ಎತ್ತಿಕೊಳ್ಳಬೇಕು" ಪ್ರಾರ್ಥನೆಯು ದೇವರನ್ನು ನಾವು ಉಪಯೋಗಿಸುವಂಥದ್ದಲ್ಲ, ಆದರೆ ದೇವರು ನಮ್ಮನ್ನು ಉಪಯೋಗಿಸುವುದಾಗಿದೆ. "ದೇವರನ್ನು ಪ್ರಯತ್ನಿಸುವ" ವಿಚಾರವು ಮೃದುವಾದ, ಉದ್ದೇಶವಿಲ್ಲದ ದೇವಘೂಷಣೆಯಾಗಿದೆ. ಒಂದು ಸ್ನೇಹತ್ವವನ್ನು "ಉಪಯೋಗಿಸುವುದು," ಆ ಸ್ನೇಹತ್ವವನ್ನು "ದುರುಪಯೋಗಪಡಿಸುವುದಾಗಿದೆ."

## ಇತರರು ವಿಚಾರಿಸಲ್ಪಡಬೇಕು

ಇತರ ಅಪೊಸ್ತಲರು ಯಾಕೋಬ ಮತ್ತು ಯೋಹಾನರೊಂದಿಗೆ ಸಿಟ್ಟುಗೊಂಡಿದ್ದರು - ಮೊದಲ ಬಿನ್ನಹವನ್ನು ಮಾಡಲಿಕ್ಕೆ ಅವರು ವಿಚಾರ ಮಾಡದೇ ಇದ್ದುದರಿಂದ ಅವರು ಕೋಪಗೊಂಡಿದ್ದರು ಎಂದು ಅರ್ಥವಾಗುತ್ತದೆ! ಒಬ್ಬನು ಮಳೆಗಾಗಿ ಪ್ರಾರ್ಥಿಸುತ್ತಾನೆ ಮತ್ತು ಒಬ್ಬನು ಬಿಸಿಲಿಗಾಗಿ ಪ್ರಾರ್ಥಿಸುತ್ತಾನೆ. ಪ್ರಾರ್ಥನೆಗಳು ಒಂದನ್ನೊಂದು ರದ್ದುಪಡಿಸಬಹುದು. ಸೃಷ್ಟಿಯು (ದೇವರು) ನೀತಿವಂತರ ಮೇಲೆ ಮತ್ತು ಅನೀತಿವಂತರ ಮೇಲೆ ಮಳೆಯನ್ನು ಸುರಿಸುತ್ತದೆ. ದೇವರು ತನ್ನನ್ನು ತಾನೇ ವಿರೋಧಿಸಿಕೊಳ್ಳಲಾರನು, ಭೂಮಿಯ ಮೇಲೆ ಐದು ಬಿಲಿಯಕ್ಕಿಂತಲೂ ಹೆಚ್ಚು ಜನರೊಂದಿಗೆ, ದೇವರ ಹಸ್ತಗಳು ತುಂಬಿಕೊಂಡಿರುತ್ತವೆ!

ಹೌದು, ಅದನ್ನು ಗುರುತಿಸಿರಿ! ಅನೇಕಾನೇಕ ಪ್ರಾರ್ಥನೆಗಳು ಕಿರಿಯವುಗಳಾಗಿವೆ! ಅವು ಸ್ವಾರ್ಥದಿಂದ ತುಂಬಿದವುಗಳೂ ತಪ್ಪಾದವುಗಳೂ ಆಗಿವೆ. ನಮ್ಮ ಪಠ್ಯವು ಆ ಸಂಗತಿಯನ್ನು ಪ್ರಕಟಿಸುತ್ತದೆ. ಯಾಕೋಬ ಮತ್ತು ಯೋಹಾನರನ್ನು ಸಿಟ್ಟಿನಿಂದ, ಆ ಮೇಲೆ ಕರುಣೆಯಿಂದ ಮತ್ತು ಆ ಮೇಲೆ ವಿನೋದದಿಂದ ನೋಡುತ್ತೇವೆ. ಅವರು ನಮ್ಮ ಹಾಗೆಯೇ ಇರುವರು! ನಮ್ಮ ಪ್ರಾರ್ಥನೆಗಳ ಬಗ್ಗೆ ಅವರು ಏನನ್ನು ಯೋಚಿಸುವರು?

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬುವದಿಲ್ಲ.***
***ನಾನು ನಿನ್ನಲ್ಲಿ ನಂಬುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

---
ಟಿಪ್ಪಣಿ

[1]"Cop-Out" ಎಂಬುದು ಚಟುವಟಿಕೆ ಇಲ್ಲದಿರುವದಕ್ಕೆ ಅಥವಾ ತಪ್ಪಿಸಿಕೊಳ್ಳುವದಕ್ಕೆ ಒಂದು ನೆಪಕ್ಕಾಗಿ ಗ್ರಾಮ್ಯಪದವಾಗಿದೆ.

© 2009 Truth for Today